ದಿನಾಂಕಃ 10 .01.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ 10 ನೇ ಪ್ರತಿವಾದಿ ಪರ ಶ್ರೀ. ಎಸ್ ಸಿ ಜಿ ವಕೀಲರಿಂದಃ**

ಕೋಣಪ್ಪ ಶಂಕರೆಪ್ಪ ಅಂಕದವರ ಮತ್ತು ಬಸಪ್ಪ ಶಂಕರೆಪ್ಪ ಅಂಕದವರ ಇಬ್ಬರು ಖಾಸ ಸಹೋದರರು ಎಂದರೆ ನಿಜ. ಅವರಿಬ್ಬರೂ ಸೇರಿ ಸಿ ಟಿ ಎಸ್ ನಂಬರ-3226 ನೇದ್ದನ್ನು ದಿ.05.12.1932 ರಲ್ಲಿ ರೂ.200/-ಕ್ಕೆ ಖರೀದಿ ಹಿಡಿದಿರುತ್ತಾರೆಂದರೆ ನನಗೆ ಗೊತ್ತಿಲ್ಲ ಏಕೆಂದರೆ ಆವಾಗ ನಾನು ಜನಿಸಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ಸದರಿ ಸಿ ಟಿ ಎಸ್ ನಂಬರ-3226 ರಲ್ಲಿ ಪ್ರಸ್ತುತ ಪ್ರಶಾಂತ ಲಾಡ್ಜ ಕಟ್ಟಿಸಿರುತ್ತಾರೆಂದರೆ ನಿಜ. ಸದರಿ ಕಟ್ಟಡವನ್ನು ನವೀಕರಿಸಿ ಈಗ ಶುಭಂ ಗಾರ್ಮೆಂಟ್ಸ ಹಾಗೂ ಲಾಡ್ಜ ಎಂದು ಈಗ ಸುಮಾರು 7-8 ವರ್ಷಗಳಿಂದ ನಡೆಸುತ್ತಿದ್ದಾರೆ ಎಂದರೆ ನಿಜ. ಕೋಣಪ್ಪ

ಶಂಕರೆಪ್ಪ ಅಂಕದವರು ತೀರಿಕೊಂಡ ನಂತರ ಸದರಿ ಆಸ್ತಿಗೆ ನನ್ನ ತಂದೆ ಅಂದರೆ ಮೃತ 1 ನೇ ಪ್ರತಿವಾದಿಯ ಹೆಸರು ವಾರಸಾ ಮೂಲಕ ದಾಖಲಾಗಿರುತ್ತದೆಂದರೆ ನಿಜ. ದಿ. 22.08.1977 ರಂದು ನನ್ನ ತಂದೆ ಎಲ್ಲಾ ಗಂಡು ಮಕ್ಕಳು ಅಂದರೆ ನನ್ನನ್ನು ಸೇರಿಕೊಂಡು ಸದರಿ ಆಸ್ತಿಗೆ ಹೆಸರು ನೊಂದಾಯಿಸಿರುತ್ತಾರೆಂದರೆ ನಿಜ.

ನಾನು ಮೂಲತಃ ಅಕ್ಕಿಸಾಗರ ಗ್ರಾಮದವರು ಎಂದರೆ ನಿಜ. ನಮ್ಮ ಮನೆತನದ ಮೂಲ ಆಸ್ತಿಯು ಮೇಲೆ ಹೇಳಿದ ಸಿ ಟಿ ಎಸ್ ನಂಬರ-3226 ಇರುತ್ತದೆಂದರೆ ನಿಜ. ಸದರಿ ಆಸ್ತಿಯಲ್ಲಿ ನಮ್ಮ ತಂದೆ ಹಾಗೂ ನಾವು ಉದ್ಯೋಗವನ್ನು ಪ್ರಾರಂಭಿಸಿ ನಂತರ ಉಳಿದ ಆಸ್ತಿಗಳನ್ನು ಖರೀದಿ ಹಿಡಿದಿರುತ್ತೇವೆ ಎಂದರೆ ಸಾಕ್ಷಿಯು ಹೌದು ಎಂದು ನುಡಿದು ನಂತರ ಇಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯಲ್ಲಿ ನಾವು ಉದ್ಯೋಗ ಮಾಡಿ ಬೇರೆ ಯಾವುದೇ ಆಸ್ತಿಗಳನ್ನು ಖರೀದಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನಾವು ಸಾಲ ಪಡೆದು ಬೇರೆ- ಬೇರೆ ಉದ್ಯೋಗಗಳನ್ನು ಮಾಡಿ ನಮ್ಮ ಸಂಪಾದನೆಯಿಂದ ಆಸ್ತಿಗಳನ್ನು ಖರೀದಿಸಿರುತ್ತೇವೆ ಎಂದು ನುಡಿಯುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ನನ್ನ ತಂದೆ ಅಂದರೆ 1 ನೇ ಪ್ರತಿವಾದಿ ವಕೀಲರ ಮೂಲಕ ಹಾಜರಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರೀರವರು ಪ್ರಸ್ತುತ ದಾವೆಗೆ ಕೈಪೀಯತ್ತನ್ನು ಸಲ್ಲಿಸಿರುವುದಿಲ್ಲ ಎಂದರೆ ನಿಜ. ಸದರೀರವರು ಈಗ ಸುಮಾರು 03 ವರ್ಷಗಳ ಹಿಂದೆ ಮೃತ ಪಟ್ಟಿರುತ್ತಾರೆಂದರೆ ನಿಜ.

ನನ್ನ ಜನ್ಮ ದಿನಾಂಕ 28.08.1972 ಇರುತ್ತದೆ. ನಾನು 10 ನೇ ತರಗತಿಯವರೆಗೆ ವಿದ್ಯಾಭಾಸ ಮಾಡಿರುತ್ತೇನೆ. 1990 ರಲ್ಲಿ 10 ನೇ ತರಗತಿಯನ್ನು ಮುಗಿಸಿರುತ್ತೇನೆ. ನಾನು ಸನ್ 1996 ರಿಂದ ಆದಾಯ ತೆರಿಗೆ ಪಾವತಿ ಮಾಡುತ್ತಾ ಬಂದಿರುತ್ತೇನೆ. ಸನ್ 1996 ರಲ್ಲಿ ನನ್ನ ಆದಾಯ ಇರುತ್ತದೆ ಎಂದು ಘೋಷಣೆ ಮಾಡಿಕೊಂಡಿರುತ್ತೇನೆಂದು ನನಗೆ ಹೇಳಲು ಆಗುವುದಿಲ್ಲ. ಸನ್ 2008 ರಲ್ಲಿ ನನ್ನ

ಆದಾಯ ಎಷ್ಟು ಇರುತ್ತದೆ ಎಂದು ಘೋಷಣೆ ಮಾಡಿಕೊಂಡಿರುತ್ತೇನೆಂದರೆ ಸಾಕ್ಷಿಯು ದಾಖಲೆಯನ್ನು ನೋಡಿ ಹೇಳಬಹುದು. ನನ್ನ 42 ನೇ ವಯಸ್ಸಿ ನವರೆಗೆ ನನ್ನ ಆದಾಯ ಎಷ್ಟು ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸಾಕ್ಷಿಯು ದಾಖಲೆಯನ್ನು ನೋಡಿ ಹೇಳಬಹುದು ಎಂದು ನುಡಿಯುತ್ತಾರೆ.

ದಿ. 13.06.2008 ರಂದು ನಾನು ಸಿ ಟಿ ಎಸ್ ನಂಬರ 2307 ನೇದ್ದನ್ನು ರೂ.68,25,000/- ಗಳಿಗೆ ನನ್ನ ಸ್ವಂತ ಸಂಪಾದನೆಯಿಂದ ಖರೀದಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿಯು ಸೆಂಟ್ರಲ್ ಬ್ಯಾಂಕನಲ್ಲಿ ರೂ.68,25,000/-ಸಾಲ ಪಡೆದು ಖರೀದಿಸಿರುತ್ತೇನೆಂದು ನುಡಿಯುತ್ತಾರೆ. ಬ್ಯಾಂಕಿನವರು ಯಾವ ಆಧಾರದ ಮೇಲೆ ನನಗೆ ಅಷ್ಟು ದೊಡ್ಡ ಮೊತ್ತದ ಸಾಲ ನೀಡಿರುತ್ತಾರೆಂದರೆ ಸಾಕ್ಷಿಯು ನನ್ನ ವ್ಯಾಪಾರವರನ್ನು ನೋಡಿ ಸಾಲವನ್ನು ನೀಡಿರುತ್ತಾರೆಂದು ನುಡಿಯುತ್ತಾರೆ. ಆ ಬಗ್ಗೆ ನಾನು ಸಾಲದ ಪತ್ರವನ್ನು ಹಾಜರು ಪಡಿಸುತ್ತೇನೆ. ನಾನು ದಿ.14.07.2014 ರಂದು ನನ್ನ 41 ನೇ ವಯಸ್ಸಿ ನಲ್ಲಿ ಸಿ ಟಿ ಎಸ್ ನಂಬರ 2308/ಬಿನೇದ್ದನ್ನು ರೂ.9,15,000/- ಗಳಿಗೆ ಖರೀದಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಹಣವನ್ನು ಸೆಂಟ್ರಲ್ ಬ್ಯಾಂಕಿನ ನನ್ನ ಓಡಿ ಖಾತೆಯಿಂದ ಬಳಸಿಕೊಂಡು ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಿ. 03.10.2011 ರಂದು ರಿ ಸ ನಂಬರ -288/1 ಪ್ಲಾಟ ನಂಬರ-62 ನೇದ್ದನ್ನು ರೂ. 6,05,000/- ಗಳಿಗೆ ಖರೀದಿಸಿರುತ್ತೇನೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸೆಂಟ್ರಲ್ ಬ್ಯಾಂಕಿನಲ್ಲಿ ಸಾಲ ಹಾಗೂ ಓಡಿ ಖಾತೆಯಲ್ಲಿನ ಹಣವನ್ನು ಬಳಸಿ ಸದರಿ ಆಸ್ತಿಯನ್ನು ಖರೀದಿಸಿರುತ್ತೇನೆಂದು ನುಡಿಯುತ್ತಾರೆ.

ದಿ.04.10.2011 ರಂದು  ರಿ ಸ ನಂಬರ -288/1 ಪ್ಲಾಟ ನಂಬರ-61 ನೇದ್ದನ್ನು ರೂ. 18,50,000/- ಗಳಿಗೆ ಖರೀದಿಸಿರುತ್ತೇನೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸೆಂಟ್ರಲ್ ಬ್ಯಾಂಕಿನಲ್ಲಿ ಸಾಲ ಹಾಗೂ ಓಡಿ ಖಾತೆಯಲ್ಲಿನ ಹಣವನ್ನು ಬಳಸಿ ಸದರಿ ಆಸ್ತಿಯನ್ನು ಖರೀದಿಸಿರುತ್ತೇನೆಂದು ನುಡಿಯುತ್ತಾರೆ. ಸದರಿ ಸಾಲವನ್ನು ನೀಡಲು ನಾನು ಬ್ಯಾಂಕಿಗೆ ಯಾವುದೇ ಭದ್ರತೆಯನ್ನು ನೀಡಿರುವುದಿಲ್ಲ.

ಸಿ ಟಿ ಎಸ್ ನಂಬರ 2302/ಎ3, ಸಿ ಟಿ ಎಸ್ ನಂಬರ 2302/ಬಿ ನೇದ್ದವುಗಳನ್ನು ನಾನು ಸ್ವಂತ ಖರೀದಿಸಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಖರೀದಿಸಲು ನಾನು ಸೆಂಟ್ರಲ್ ಬ್ಯಾಂಕಿನಿಂದ ಸಾಲ ಪಡೆದಿರುತ್ತೇನೆಂದು ನುಡಿಯುತ್ತಾರೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ಎಲ್ಲ ಆಸ್ತಿಗಳನ್ನು ನನ್ನ ಎಲ್ಲಾ ಸಹೋದರರು ಸೇರಿಕೊಂಡು ನನ್ನ ಹೆಸರಿನಲ್ಲಿ ಆದಾಯ ತೆರಿಗೆ ಪಾವತಿಸಲು ಅನುಕೂಲವಾಗಲಿ ಎಂದು ಖರೀದಿಸಿರುತ್ತಾರೆಂದರೆ ಸರಿಯಲ್ಲ.

ನಾನು 12 ವರ್ಷ ದವನಿದ್ದಾಗಿನಿಂದ ನನ್ನ ಸಹೋದರರು ನಡೆಸುತ್ತಿದ್ದ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಾ ಬಂದಿರುತ್ತೇನೆ. ಆಗ ನನಗೆ ವಾರಕ್ಕೆ ಖರ್ಚಿಗೆ ರೂ.10/- ಕೊಡುತ್ತಿದ್ದರು. ಆಗ ನನಗೆ ಯಾವುದೇ ಉಳಿತಾಯ ಇರಲಿಲ್ಲ. ನನ್ನ ಹೆಸರಿಗೆ ಆಸ್ತಿಗಳು ಇರುವುದನ್ನು ದುರುಪಯೋಗಪಡಿಸಿಕೊಂಡು ಸದರಿ ಆಸ್ತಿಗಳು ನನ್ನ ಸ್ವಯಾರ್ಜಿತ ಆಸ್ತಿಗಳು ಇರುತ್ತವೆ ಎಂದು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನಗೆ ಯಾವುದೇ ರೀತಿಯ ಸ್ವಂತ ಆದಾಯ ಇರಲಿಲ್ಲ, ನಾನು ಎಲ್ಲ ಸಹೋದರರಿಗಿಂತ ಚಿಕ್ಕವನಾಗಿದ್ದರಿಂದ ನನಗೆ ಯಾವುದೇ ಕೆಲಸ ಮಾಡಲು ನನ್ನ ಸಹೋದರರು ಬಿಟ್ಟಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಸಹೋದರರು ನನ್ನನ್ನು ಪಾಲುದಾರರನ್ನಾಗಿ

ಸೇರಿಸಿಕೊಂಡು ವ್ಯಾಪಾರ ಮಾಡಿರುತ್ತಾರೆಂದು ನುಡಿಯುತ್ತಾರೆ. ನಮ್ಮ ಕುಟುಂಬಕ್ಕೆ ಇರುವ ಎಲ್ಲ ಆಸ್ತಿಗಳು ಮೂಲ ಆಸ್ತಿಯಾದ ಸಿ ಟಿ ಎಸ್ ನಂಬರ-3226 ನೇದ್ದರಲ್ಲಿ ನಡೆಸುತ್ತಿದ್ದ ಪ್ರಶಾಂತ ಲಾಡ್ಜ ನ ಸಂಪಾದನೆಯಿಂದ ಖರೀದಿಸಿದ ಆಸ್ತಿಗಳು ಇದ್ದು, ನಮ್ಮ ಜಂಟಿ ಕುಟುಂಬದ ಆಸ್ತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಸದರಿ ನನ್ನ ಹೆಸರಿನಲ್ಲಿರುವ ಆಸ್ತಿಗಳಲ್ಲಿ ನಮ್ಮ ಸಹೋದರರಿಗೆ ಪಾಲು ಕೊಡಬೇಕಾಗುತ್ತದೆಂಬ ಉದ್ದೇಶದಿಂದ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸಿ ಟಿ ಎಸ್ ನಂಬರ-3226 ರಲ್ಲಿ 11 ನೇ ಪ್ರತಿವಾದಿ ಪ್ರಶಾಂತ ಲಾಡ್ಜನ್ನು ಕಟ್ಟಿರುತ್ತಾನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾವೆಲ್ಲರೂ ಕೂಡಿಯೇ ಸದರಿ ಲಾಡ್ಜನ್ನು ಕಟ್ಟಿಸಿರುತ್ತೇವೆ ಎಂದರೆ ನಿಜ. ಸದರಿ 11ನೇ ಪ್ರತಿವಾದಿ ನನ್ನ ತಂದೆಯಿಂದ ಖೊಟ್ಟಿಯಾಗಿ ದಾನಪತ್ರ ಬರೆಸಿಕೊಂಡಿರುತ್ತಾನೆಂದರೆ ಸರಿಯಲ್ಲ. ನಾನು 11ನೇ ಪ್ರತಿವಾದಿಯೊಂದಿಗೆ ಮಿಲಾಪಿಯಾಗಿ ಆ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

1 ನೇ ಪ್ರತಿವಾದಿ ತಾನು ಸಾಯುವಕ್ಕಿಂತ ಅಂದರೆ ಇವತ್ತಿಗೆ 15 ವರ್ಷದಿಂದ ಅನಾರೋಗ್ಯದಿಂದ ಬಳಲುತ್ತಿದ್ದು, ಹೊರಗಡೆ ಓಡಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆತನಿಗೆ ತಾನು 11 ನೇ ಪ್ರತಿವಾದಿಗೆ ಮೇಲೆ ಹೇಳಿದ ಆಸ್ತಿಗೆ ಸಂಬಂಧಿಸಿದಂತೆ ದಾನಪತ್ರವನ್ನು ಬರೆದುಕೊಟ್ಟ ಬಗ್ಗೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯಲು ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯನ್ನು ನಾವು ಹೆದರಿಸಿ ಮತ್ತು ಬೆದರಿಸಿ ಆತನಿಂದ ಖೊಟ್ಟಿ ಕಾಗದಪತ್ರಗಳನ್ನು ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆತನಿಗೆ ನ್ಯಾಯಾಲಯಕ್ಕೆ ಬರದಂತೆ ಬಂಧನದಲ್ಲಿ ಇಟ್ಟಿದ್ದೆವು ಎಂದರೆ ಸರಿಯಲ್ಲ.

ನಾನು, ನನ್ನ ಹೆಂಡತಿ ಹಾಗೂ ಮಕ್ಕಳು ದಿಲ್ಲಿ ಸೆಲೆಕ್ಷನ್ ಹೆಸರಿನ ಬಟ್ಟೆ ಅಂಗಡಿಯನ್ನು ನಡೆಸುತ್ತಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಅಂಗಡಿಯನ್ನು ಸನ್ 1996 ರಲ್ಲಿ ಪ್ರಾರಂಭಿಸಿರುತ್ತೇವೆ. ಅದಕ್ಕೆ ಎಷ್ಟು ಬಂಡವಾಳ ತೊಡಗಿಸಿದ್ದೆವು ಎಂದು ನನಗೆ ಈಗ ಹೇಳಲು ಅಗುವುದಿಲ್ಲ ಆದರೆ ಬ್ಯಾಂಕಿನಿಂದ ಸಾಲ ಪಡೆದು ಬಂಡವಾಳ ಹಾಕಿದ್ದೆವು ಎಂದು ನುಡಿಯುತ್ತಾರೆ. ಹಳೆ ಮನೆಯನ್ನು ಕೆಡವಿ ದಾವಾಸ್ತಿ ನಂಬರ 23 ಮತ್ತು 24 ರಲ್ಲಿ ಮನೆಯನ್ನು ಕಟ್ಟಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಮನೆಯನ್ನು ಕಟ್ಟಿಸಲು ನಾನು IDFC Bank ನಿಂದ ಒಂದೂವರೆ ಕೋಟಿ ಸಾಲ ಪಡೆದಿರುತ್ತೇನೆಂದು ಹೇಳುತ್ತಾರೆ. ನಾನು ಮೇಲೆ ಹೇಳಿದಂತೆ ಬ್ಯಾಂಕಿನಿಂದ ಸಾಲ ಪಡೆದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

ನಮಗೆ ಬಸವರಾಜ ಎಂಬ ಸಹೋದರ ಇರುತ್ತಾನೆ. ಆತ ಈಗ ಸುಮಾರು 15 ವರ್ಷಗಳ ಹಿಂದೆ ಮೃತಪಟ್ಟಿರುತ್ತಾನೆ. ಆತ ಯಾವುದೇ ಆಸ್ತಿ ತನ್ನ ಹೆಸರಿಗೆ ಖರೀದಿಸಿರುವುದಿಲ್ಲ. ಆತನ ಹೆಂಡತಿ, ಮಕ್ಕಳು ಅಂದರೆ 15 ರಿಂದ 17 ನೇ ಪ್ರತಿವಾದಿಯರಿಗೆ ನಮ್ಮ ಪಿತ್ರಾರ್ಜಿತ ಆಸ್ತಿಯಲ್ಲಿ ಪಾಲು ಕೊಡಬಹುದು ಎಂದು ನುಡಿಯುತ್ತಾರೆ. ನನ್ನ ಹಾಗೂ ನನ್ನ ಸಹೋದರರ ಮಧ್ಯೆ ಈ ಹೊತ್ತಿಗೂ ಸಹ ಯಾವುದೇ ರೀತಿ ಪಾಲು ವಾಟ್ನಿಯಾಗಿರುವುದಿಲ್ಲ ಎಂದರೆ ನಿಜ. ಅದೇ ರೀತಿ ಪ್ರಸ್ತುತ ದಾವೆಯನ್ನು ಹೊರತುಪಡಿಸಿ ನಮ್ಮ ಕುಟುಂಬದ ಆಸ್ತಿಗಳಿಗೆ ಸಂಬಂಧಿಸಿದಂತೆ ಪಾಲು ವಾಟ್ನಿಗಾಗಿ ಯಾವುದೇ ದಾವೆ ಸಲ್ಲಿಸಿರುವುದಿಲ್ಲ. ನನ್ನ ಸಹೋದರ ಮೃತ ಬಸವರಾಜ ಯಾವುದೇ ಕೆಲಸ ಮಾಡುತ್ತಿರಲಿಲ್ಲ, ಆತನಿಗೆ ಯಾವುದೇ ಸಂಪಾದನೆ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಸಹೋದರರ ಆಸ್ತಿಗಳನ್ನು ಎತ್ತಿ ಹಾಕಬೇಕೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ-ಪ್ರತಿವಾದಿ 15 ರಿಂದ 17 ನೇ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ